ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1457
2	ಸದಸ್ಯರ ಹೆಸರು	:	ಶ್ರೀ ಎಂ.ಸಿ. ವೇಣುಗೋಪಾಲ್
3	ಉತ್ತರಿಸುವ ದಿನಾಂಕ	:	19-03-2020
4	ಉತ್ತರಿಸುವವರು	:	ಮುಖ್ಯಮಂತ್ರಿ

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಜಯನಗರ 4ನೇ ಬಡಾವಣೆಯಲ್ಲಿರುವ ಸರ್ವೆ ನಂ. 74/1, 75/2 ಮತ್ತು 75/3 ಈದ್ಗಾ ಮೈದಾನದ ವಕ್ಫ್ ಬೋರ್ಡ್ ಆಸ್ತಿಯನ್ನು ಇಲಾಖೆ ವಾಪಸ್ಸು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವಾಪಸ್ಸು ಪಡೆಯಲು ಕಾರಣವೇನು; ನ್ಯಾಯಾಲಯ ಇಲಾಖೆಗೆ ಇತ್ಯರ್ಥಗೊಳಿಸಲು ಸೂಚಿಸಿದ್ದರೂ ಇದುವರೆಗೂ ಇಲಾಖೆಯು ಕ್ರಮಕೈಗೊಳ್ಳಲು ವಿಳಂಬ ಮಾಡಿರುವುದು ಏಕೆ?	ಬಂದಿದೆ, ಮಹಾನಗರ ಪಾಲಿಕೆ ವತಿಯಿಂದ ವಕ್ಫ್ ಬೋರ್ಡ್ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಜಮೀನಿನ ಮಾಲೀಕತ್ವದ ಬಗ್ಗೆ ರಿಟ್ ಪಿಟಿಷನ್ ಸಂಖ್ಯೆ:11651-82, ದಿನಾಂಕ:17-09-1991ರಲ್ಲಿ ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ಸಿವಿಲ್ ಕೋರ್ಟ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಲು ಸೂಚಿಸಿರುತ್ತದೆ. ನಗರವು ಬೆಳೆದಂತೆ ಸ್ಮಶಾನದ ಸುತ್ತ ಜನವಸತಿ ಅಭಿವೃದ್ಧಿಗೊಂಡಿದ್ದರಿಂದ ಶವ ಸಂಸ್ಕಾರ ಮಾಡುವುದನ್ನು 1970ರಲ್ಲಿ ಸ್ಥಗಿತಗೊಳಿಸಿ, ಇದಕ್ಕೆ ಪರ್ಯಾಯವಾಗಿ ಬನಶಂಕರಿ 1ನೇ ಹಂತದಲ್ಲಿ ದಫನ್ ಭೂಮಿಗಾಗಿ ಸುಮಾರು 2.1/2ಎಕರೆ ಜಮೀನನ್ನು ನೀಡಲಾಗಿದೆ. ಇದರ ವಿರುದ್ಧ ಮುಸ್ಲಿಂ ಸಮುದಾಯದವರು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ಸಂಖ್ಯೆ: 92/1970 ಅನ್ನು ದಾಖಲಿಸಿದ್ದು, ಸದರಿ ದಾವೆಯು ವಜಾಗೊಂಡಿರುತ್ತದೆ. ಜಯನಗರ ನಾಗರೀಕ ಸಮಿತಿಯವರು ಸರ್ಕಾರ, ಬಿಬಿಎಂಪಿ ಮತ್ತು ಅಧ್ಯಕ್ಷರು ಮಸೀದಿ ಇವರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 21843/1990 ಅನ್ನು ದಾಖಲಿಸಿ, ಸದರಿ ಸ್ವತ್ತಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಅನಧಿಕೃತ ಕಟ್ಟಡವನ್ನು ತೆರವುಗೊಳಿಸಲು ಕೋರಿರುತ್ತಾರೆ. ಸದರಿ ದಾವೆಯು ಸಹ ವಜಾಗೊಂಡಿರುತ್ತದೆ. ಇದನ್ನು ಪ್ರಶ್ನಿಸಿ ಜಯನಗರ ನಾಗರೀಕ ಕಲ್ಯಾಣ ವೇದಿಕೆರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 14590/1999 ಅನ್ನು ದಾಖಲಿಸಿದ್ದರು. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು Later Dismissed as withdrawn ಎಂಬುದಾಗಿ ಆದೇಶ ನೀಡಿರುತ್ತದೆ.

ನಂತರ ಬೆಂಗಳೂರು ಜಯನಗರ 4ನೇ ಬಡಾವಣೆಯಲ್ಲಿರುವ ಸರ್ವೆ ನಂ.74/1, 75/2 ಮತ್ತು 75/3 ರಲ್ಲಿರುವ ಜಾಗಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿರವರ ಹೆಸರಿನಲ್ಲಿ ನಗರ ಪಾಲಿಕೆಯಲ್ಲಿ ಆದೇಶ ಸಂಖ್ಯೆ: ಹೆಚ್‌ಯುಡಿ 59 ಎಂಎನ್‌ಜಿ 1986 ಭಾ–2, ದಿನಾಂಕ: 18–02–1999 ರಲ್ಲಿ ನೀಡಿರುವ ನಿರ್ದೇಶನದನ್ವಯ ಖಾತಾ ನೊಂದಾಯಿಸಲಾಗಿರುತ್ತದೆ.

ಹಿಂದಿನ ಮೈಸೂರು ಸರ್ಕಾರದ ದಿನಾಂಕ: 09–09–1958ರ ನಡವಳಿಗಳಲ್ಲಿ ಸದರಿ ಸ್ಥಳದಲ್ಲಿ ಯಾವುದೇ ಕಟ್ಟಡವನ್ನು ನಿರ್ಮಾಣ ಮಾಡದೇ ಮುಸ್ಲಿಂ ಧರ್ಮದ ವತಿಯಿಂದ ಸ್ವಚ್ಛತೆಯನ್ನು ಕಾಪಾಡುವಂತೆ ಆದೇಶಿಸಲಾಗಿರುತ್ತದೆ. ಆದರೆ, ಪ್ರಸ್ತುತ ಸದರಿ ಜಾಗದಲ್ಲಿ ಅನಧಿಕೃತವಾಗಿ ಮಜೀದ್ ಇಸ್ಲಾಮಾಬಾದ್ ಸಂಸ್ಥೆ ವತಿಯಿಂದ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ದಿನಾಂಕ: 09–09–1958ರ ಆದೇಶಕ್ಕೆ ವಿರುದ್ಧವಾಗಿರುವುದರಿಂದ ಹಾಗೂ ಈ ಹಿಂದೆ ಕೆ.ಎಂ.ಸಿ ಕಾಯ್ದೆ 1976 ಕಲಂ 96ರಡಿ ಹೊರಡಿಸಿದ ದಿನಾಂಕ: 18–02–1999 ರ ಆದೇಶವು ಕಾನೂನಿಗೆ ಅನುಗುಣವಾಗಿಲ್ಲದಿರುವುದನ್ನು ಮನಗಂಡು ದಿನಾಂಕ: 18–02–1999 ರಂದು ಹೊರಡಿಸಿರುವ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 287 ಎಂಎನ್‌ವೈ 1999, ದಿನಾಂಕ: 30–06–2011 ರಲ್ಲಿ ಹಿಂಪಡೆಯಲಾಗಿರುತ್ತದೆ. ಪ್ರಸ್ತುತ ಸ್ವತ್ತಿನ ಖಾತೆಯನ್ನು ಪಾಲಿಕೆಯ ಹೆಸರಿನಲ್ಲಿ ನೊಂದಾಯಿಸಲಾಗಿದೆ.

ಸದರಿ ಸರ್ಕಾರದ ಆದೇಶವನ್ನು ಪ್ರಶ್ನಿಸಿ ವಕ್ಫ್ ಮಂಡಳಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 27054/2011 (LB-BBMP) ಅನ್ನು ದಾಖಲಿಸಿದ್ದ, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 27–08–2018 ರಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ.

In view of the aforesaid reasons, the writ petition is allowed. Impugned order passed by the State Government dated 30-06-2011 (Annexure-A) is hereby

		quashed. The matter is remanded to the State Government to re-consider the rival contentions, after giving notice and hearing the petitioner, respondent Nos.3, 4 and 5 and to pass appropriate orders in accordance with law. All the contentions urged by the learned counsel for the parties are kept open. ಪ್ರಸ್ತುತ ಮಾನ್ಯ ನ್ಯಾಯಾಲಯದ ಆದೇಶದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರಲ್ಲಿ ಈ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ಸಂಖ್ಯೆ: ನಅಇ 89 ಎಂಎನ್‌ಜೆ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ